# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ದೂರವಾಣಿ ಸಂಖ್ಯೆ : 0836-2322771
ಫ್ಯಾಕ್ಸ್ ನಂ : 0836-2324307
Web Site : hescom.co.in

ನಿಗಮ ಕಛೇರಿ,
ಪಿ. ಬಿ. ರೋಡ ನವನಗರ, ಹುಬ್ಬಳ್ಳಿ 580 025.
Email ID : dcarev12@rediffmail.com


ಪ.ಸಂ : ಹುವಿಸಕಂನಿ/ಆಸ/ನಿ(ಕಂ&ಲೆ)/ಉಲೆನಿ(ಕಂ)/12-13/CYS-2434 ದಿನಾಂಕ : 16 JAN 2013

**ನಿಗಮ ಕಛೇರಿ, ಹುಬ್ಬಳ್ಳಿಯಲ್ಲಿ ದಿನಾಂಕ : 26-12-2012 ರಂದು ಜರುಗಿದ ಕಂದಾಯ ಪರಿಶೀಲನಾ ಸಭೆಯ ನಡಾವಳಿಗಳು**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ : 26-12-2012 ರಂದು ನಿಗಮ ಕಛೇರಿಯ ಸಭಾಂಗಣದಲ್ಲಿ ವಲಯ/ವೃತ್ತದ ಅಧಿಕಾರಿಗಳೊಂದಿಗೆ ನವ್ಹಂಬರ್-2012 ರ ತಿಂಗಳಿನ ಕಂದಾಯ ಪರಿಶೀಲನಾ ಸಭೆಯು ಜರುಗಿದ್ದು, ನವ್ಹಂಬರ್-2012 ರ ಕಂದಾಯ ಬೇಡಿಕೆ, ವಸೂಲಾತಿ, ಗುರಿ, ಅಂತಿಮ ಶಿಲ್ಕು ಹಾಗೂ ಇತರೆ ವಿಷಯಗಳ ಕುರಿತು ಚರ್ಚಿಸಿದ್ದು, ನಡಾವಳಿಗಳು ಕೆಳಗಿನಂತಿವೆ.

1. **ಅಜೇಂಡಾ 1 (ಎ) : ನವ್ಹಂಬರ್-2012 ರ ಅಂತ್ಯಕ್ಕೆ ಎಲ್.ಟಿ-1 (18 ಯುನಿಟ್ ಮೇಲ್ಪಟ್ಟು) ಜಕಾತಿ ಸ್ಥಾವರಗಳ ಬಾಕಿ ವಸೂಲಾತಿ ಕಂದಾಯ ಕುರಿತು ಚರ್ಚೆ :**

ವೃತ್ತವಾರು ಎಲ್.ಟಿ-1 ಜಕಾತಿಯ ನಿಗದಿತ ವಸೂಲಾತಿ ಗುರಿ, ಬೇಡಿಕೆ, ವಸೂಲಿ, ಬಾಕಿ ವಿವರ

(Amt in lakhs)

| Name of the Circle | Target | OB | Demand | Cash | Adjustment | Total Colln | CB | Withdrawals | Amt. of Long disconnected installations | Recovery of Long disconnected installations | Net CB |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| Belgaum | 70.26 | 673.33 | 30.80 | 44.01 | 24.05 | 68.05 | 636.07 | - | 0.18 | 0.05 | 635.89 |
| Chikkodi | 71.10 | 884.12 | 29.17 | 42.43 | 126.58 | 169.01 | 744.28 | - | - | 0.00 | 744.28 |
| Bijapur | 30.78 | 225.30 | 11.29 | 13.54 | 6.43 | 19.98 | 216.61 | - | - | 0.11 | 216.61 |
| Bagalkot | 33.13 | 399.18 | 14.35 | 15.15 | 4.73 | 19.89 | 393.64 | - | - | 0.04 | 393.64 |
| **Belgaum Zone** | **205.27** | **2181.92** | **85.61** | **115.13** | **161.80** | **276.93** | **1990.61** | **0.00** | **0.18** | **0.20** | **1990.43** |
| Hubli | 108.94 | 1469.20 | 35.32 | 27.58 | 1.25 | 28.83 | 1475.69 | 59.57 | 34.55 | 0.23 | 1381.57 |
| Haveri | 162.39 | 2349.60 | 41.75 | 37.03 | 0.04 | 37.07 | 2354.29 | 0.00 | 16.45 | 0.29 | 2337.84 |
| Sirsi | 31.07 | 296.64 | 20.46 | 22.09 | 0.00 | 22.09 | 295.01 | 0.00 | 35.23 | 0.46 | 259.78 |
| **Hubli Zone** | **302.40** | **4115.44** | **97.54** | **86.70** | **1.29** | **87.99** | **4124.99** | **59.57** | **86.23** | **0.98** | **3979.19** |

- ಬೆಳಗಾವಿ ವಲಯದ 4 ವೃತ್ತಗಳಲ್ಲಿ ನವ್ಹಂಬರ್-2012 ನೇ ತಿಂಗಳ ಕಂದಾಯ ಬೇಡಿಕೆಗಿಂತ ವಸೂಲಾತಿ ಹೆಚ್ಚಿಗೆ ಆಗಿರುವುದನ್ನು ಗಮನಿಸಲಾಯಿತು. ಅದರಲ್ಲಿ ಬೆಳಗಾವಿ ವೃತ್ತ ಹಾಗೂ ಚಿಕ್ಕೋಡಿ ವೃತ್ತಗಳಲ್ಲಿ ವಸೂಲಾತಿಯು ಬೇಡಿಕೆಗಿಂತ ~ ಒಂದುವರೆ ಪಟ್ಟು ಹೆಚ್ಚಾಗಿ ಮಾಡಿರುವುದನ್ನು ಗಮನಿಸಿ ಒಳ್ಳೆಯ ಪ್ರಗತಿ ಎಂದು ಶ್ಲಾಘಿಸಲಾಯಿತು. ಉಳಿದ ವೃತ್ತಾಧಿಕಾರಿಗಳಿಗೆ ಇದೇ ರೀತಿಯಾಗಿ ವಸೂಲಾತಿಗೆ ಕ್ರಮ ಕೈಗೊಂಡು ಪ್ರಗತಿ ಸಾಧಿಸಲು ಸೂಚಿಸಲಾಯಿತು.
- ಹುಬ್ಬಳ್ಳಿ ವಲಯದ 3 ವೃತ್ತಗಳ ಪೈಕಿ ಶಿರಸಿ ವೃತ್ತದಲ್ಲಿ ಕಂದಾಯ ವಸೂಲಾತಿಯು ಬೇಡಿಕೆಗಿಂತ ಹೆಚ್ಚಿಗೆ ಆಗಿದ್ದು, ಹುಬ್ಬಳ್ಳಿ ವೃತ್ತ ಮತ್ತು ಹಾವೇರಿ ವೃತ್ತಗಳಲ್ಲಿ ಕಂದಾಯ ಬೇಡಿಕೆಯಷ್ಟು ವಸೂಲಾತಿ ಆಗದೇ ಇರುವುದನ್ನು ಗಮನಿಸಿ ಮುಂದಿನ ಅವಧಿಯಲ್ಲಿ ಕಡ್ಡಾಯವಾಗಿ ಬೇಡಿಕೆಯಷ್ಟು ವಸೂಲಿ ಮಾಡಲು ಸೂಚಿಸಲಾಯಿತು.

- ಹುಬ್ಬಳ್ಳಿ ವೃತ್ತದ ಹುಬ್ಬಳ್ಳಿ ಗ್ರಾಮೀಣ ವಿಭಾಗದಲ್ಲಿ ರೂ. 13.87 ಲಕ್ಷ ಹಾಗೂ ಧಾರವಾಡ ಗ್ರಾಮೀಣ ವಿಭಾಗದಲ್ಲಿ ರೂ. 45.70 ಲಕ್ಷ ಒಟ್ಟು ರೂ. 59.57 ಲಕ್ಷ ಹಿಂಪಡೆಯುವ ಮೊತ್ತವಿದ್ದು, ಸದರಿ ಮೊತ್ತವನ್ನು ಹಿಂಪಡೆಯುವ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.
- ಹುಬ್ಬಳ್ಳಿ ವಲಯದ ಹುಬ್ಬಳ್ಳಿ ವೃತ್ತದಲ್ಲಿ ರೂ. 34.55 ಲಕ್ಷ, ಹಾವೇರಿ ವೃತ್ತದಲ್ಲಿ ರೂ. 16.45 ಲಕ್ಷ ಹಾಗೂ ಶಿರಸಿ ವೃತ್ತದಲ್ಲಿ ರೂ. 35.23 ಲಕ್ಷ ಒಟ್ಟು ರೂ. 86.23 ಲಕ್ಷ ದೀರ್ಘ ಕಾಲದಿಂದ ವಿದ್ಯುತ್ ನಿಲುಗಡೆಗೊಂಡಿರುವ ಸ್ಥಾವರಗಳ ಮೊತ್ತವಿದ್ದು ಇದರಲ್ಲಿ ನವ್ಹಂಬರ್-2012 ರಲ್ಲಿ ಕೇವಲ ರೂ. 0.98 ಲಕ್ಷ ಮಾತ್ರ ವಸೂಲಾತಿಯಾಗಿದ್ದು ಮುಂದಿನ ದಿನಗಳಲ್ಲಿ ಸಂಪೂರ್ಣ ಮೊತ್ತವನ್ನು ವಸೂಲಾತಿ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.
- ಕಂಪನಿ ಕಛೇರಿಯ ಆದೇಶ ಸಂಖ್ಯೆ : ಸಿವೈಎಸ್-256, ದಿನಾಂಕ : 16-05-2011 ರಲ್ಲಿ 18 ಯುನಿಟ್ ಮೇಲ್ಪಟ್ಟು ಬೇಡಿಕೆಯಾದ ಬಿಜೆ/ಕೆಜೆ ಸ್ಥಾವರಗಳ ಬಾಕಿ ಮೊತ್ತವನ್ನು ಕಂತುಗಳಲ್ಲಿ ಪಾವತಿಸಿಕೊಳ್ಳಲು ಹಾಗೂ ವಿದ್ಯುತ್ ನಿಲುಗಡೆ ಮಾಡಿ ವಸೂಲಾತಿ ಮಾಡಲು ಆದೇಶವಿರುತ್ತದೆ. ಅದರಂತೆ ಕ್ರಮ ಜರುಗಿಸಿ ವಸೂಲಾತಿ ಮಾಡಲು ಸೂಚಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

2. **<u>ಅಜೇಂಡಾ ೧೮ : ನವ್ಹಂಬರ್-2012 ರ ಅಂತ್ಯಕ್ಕೆ ಎಲ್.ಟಿ-2 ಜಕಾತಿ ಸ್ಥಾವರಗಳ ಬಾಕಿ ವಸೂಲಾತಿ ಕಂದಾಯ ಕುರಿತು ಚರ್ಚೆ :</u>**

ವೃತ್ತವಾರು ಎಲ್.ಟಿ-2 ಜಕಾತಿಯ ನಿಗದಿತ ವಸೂಲಾತಿ ಗುರಿ, ಬೇಡಿಕೆ, ವಸೂಲಿ, ಬಾಕಿ ವಿವರ :

3. (Amt in lakhs)

| Name of the Circle | Target | OB | Dem and | Colln | Total CB | Net CB | Net CB Ratio | Court cases | Appeal cases | Withdr awals | Amt. of Long dis instal |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| Belgaum | 893.49 | 420.29 | 839.60 | 853.27 | 406.62 | 263.69 | 0.31 | 0.92 | 3.00 | 0.00 | 139.01 |
| Chikkodi | 331.59 | 500.58 | 245.25 | 292.31 | 453.52 | 198.01 | 0.81 | 0.00 | 0.40 | 0.00 | 255.11 |
| Bijapur | 662.75 | 1362.07 | 426.27 | 444.77 | 1343.57 | 939.07 | 2.20 | 1.48 | 1.03 | 0.00 | 401.99 |
| Bagalkot | 577.42 | 1141.42 | 375.15 | 396.87 | 1119.70 | 545.02 | 1.45 | 0.00 | 1.74 | 1.14 | 571.80 |
| **Belgaum Zone** | **2465.25** | **3424.37** | **1886.27** | **1987.22** | **3323.41** | **1945.79** | **1.03** | **2.40** | **6.17** | **1.14** | **1367.91** |
| Hubli | 1309.46 | 1721.95 | 196.87 | 206.49 | 1712.33 | 1100.95 | 5.59 | 0.00 | 0.60 | 4.14 | 606.64 |
| Haveri | 311.76 | 455.88 | 227.02 | 236.03 | 446.86 | 186.02 | 0.82 | 0.11 | 0.59 | 0.00 | 260.14 |
| Sirsi | 589.46 | 319.86 | 596.57 | 575.84 | 340.59 | 293.24 | 0.49 | 0.15 | 0.71 | 0.00 | 46.48 |
| **Hubli Zone** | **2210.68** | **2497.69** | **1020.46** | **1018.37** | **2499.78** | **1580.22** | **1.55** | **0.26** | **1.90** | **4.14** | **913.26** |

ಹುಬ್ಬಳ್ಳಿ ವಲಯದ ಎಲ್.ಟಿ-2 ಜಕಾತಿಯ ಬೇಡಿಕೆ ಮತ್ತು ವಸೂಲಾತಿಯನ್ನು ಪರಿಶೀಲಿಸಲಾಗಿ ಹುಬ್ಬಳ್ಳಿ ವೃತ್ತ ಮತ್ತು ಹಾವೇರಿ ವೃತ್ತದಲ್ಲಿ ಬೇಡಿಕೆಗಿಂತ ಹೆಚ್ಚು ವಸೂಲಾತಿ ಮಾಡಿದ್ದು, ಶಿರಸಿ ವೃತ್ತದಲ್ಲಿ ಬೇಡಿಕೆ ರೂ. 596.57 ಲಕ್ಷಕ್ಕೆ ವಸೂಲಾತಿ ರೂ. 575.84 ಲಕ್ಷ ಆಗಿರುತ್ತದೆ. ರೂ. 20.73 ಲಕ್ಷ ಕಡಿಮೆ ವಸೂಲಾತಿ ಆಗಿದ್ದು ಮುಂದಿನ ತಿಂಗಳನಲ್ಲಿ ಸದರಿ ಮೊತ್ತವನ್ನು ವಸೂಲಾತಿ ಮಾಡಲು ಸೂಚಿಸಲಾಯಿತು. ಅದರಲ್ಲಿ ಮುಖ್ಯವಾಗಿ ದಾಂಡೇಲಿ ಉಪವಿಭಾಗದಲ್ಲಿ ಬೇಡಿಕೆ ರೂ. 33.28 ಲಕ್ಷ ಕ್ಕೆ ವಸೂಲಾತಿ ರೂ. 19.56 ಲಕ್ಷ ಆಗಿದ್ದು ಸದರಿ ವ್ಯತ್ಯಾಸಕ್ಕೆ ಜನರೇಟೆಡ್ ಡಿ.ಸಿ.ಬಿ. ತೆಗೆದುಕೊಂಡಿರುವುದರಿಂದ ಡಿಮಾಂಡ್ ಹೆಚ್ಚಾಗಿರುವುದಾಗಿ ತಿಳಿಸಿದ್ದು ಇದನ್ನು ಪರಿಶೀಲಿಸಿ ಸರಿಪಡಿಸಲು ತಿಳಿಸಲಾಯಿತು.

- ಹುಬ್ಬಳ್ಳಿ ಗ್ರಾಮೀಣ ವಿಭಾಗದಲ್ಲಿ Net CB Ratio 3.42, ಧಾರವಾಡ ಗ್ರಾಮೀಣ ವಿಭಾಗದಲ್ಲಿ 3.21, ಗದಗದಲ್ಲಿ 3.87 ಇದ್ದು ಮುಂದಿನ ಅವಧಿಯಲ್ಲಿ ವಸೂಲಾತಿ ಪ್ರಗತಿ ಸಾಧಿಸಿ Net CB Ratio ಕಡಿಮೆ ಮಾಡಲು ಸೂಚಿಸಲಾಯಿತು.
- ಬೆಳಗಾವಿ ವಲಯದ ಎಲ್.ಟಿ-2 ಜಕಾತಿಯಲ್ಲಿ ಬೆಳಗಾವಿ, ಚಿಕ್ಕೋಡಿ, ಬಿಜಾಪೂರ ಹಾಗೂ ಬಾಗಲಕೋಟೆ ವೃತ್ತಗಳಲ್ಲಿ ಬೇಡಿಕೆಗಿಂತ ಹೆಚ್ಚು ವಸೂಲಾತಿ ಆಗಿದ್ದು ಮುಂದಿನ ತಿಂಗಳಲ್ಲಿಯೂ ಸಹ ಇದೇ ರೀತಿ ಸಾಧಿಸುವಂತೆ ಸೂಚಿಸಲಾಯಿತು.

- ರಾಯಬಾಗ ವಿಭಾಗದಲ್ಲಿ Net CB Ratio 2.48 ಹಾಗೂ ಬಿಜಾಪೂರ 1.90, ಇಂಡಿ 3.56, ಜಮಖಂಡಿ 2.27 ಇದ್ದು ನಿವ್ವಳ ವಸೂಲಾತಿಯನ್ನು ಹೆಚ್ಚು ಮಾಡಿ Net CB Ratio ಕಡಿಮೆ ಮಾಡಲು ಸೂಚಿಸಲಾಯಿತು. ಬಿಜಾಪೂರ ವಿಭಾಗದ ಸಿ.ಎಸ್.ಡಿ-1 ಹಾಗೂ ಸಿ.ಎಸ್.ಡಿ-2 ಉಪವಿಭಾಗದ ಮೀನಾಕ್ಷಿ ಫೀಡರ್ ಹಾಗೂ ಬಡೆಕಮಾನ ಫೀಡರ್‌ನಲ್ಲಿ ಬಾಕಿ ಜಾಸ್ತಿ ಇದ್ದು ಜಾಗೃತ ದಳದವರೊಂದಿಗೆ ವಸೂಲಾತಿ ಕಾರ್ಯಯೋಜನೆ ಹಮ್ಮಿಕೊಂಡು ಬಾಕಿ ವಸೂಲಾತಿ ಮಾಡಲು ಸೂಚಿಸಲಾಯಿತು.
- ಇಂಡಿ ವಿಭಾಗದಲ್ಲಿ ನೇರ ಸಂಪರ್ಕ ಹೊಂದಿದ ಸ್ಥಾವರಗಳು ಹೆಚ್ಚು ಇದ್ದು, ಜಾಗೃತದಳದವರೊಂದಿಗೆ ಕಾರ್ಯ ಯೋಜನೆ ರೂಪಿಸಿಕೊಂಡು, ಕಂದಾಯ ಬಾಕಿ ವಸೂಲಿ ಮಾಡುವಂತೆಯೂ ಹಾಗೂ ನೇರ ಸಂಪರ್ಕ ಮಾಡಿಕೊಂಡ ಗ್ರಾಹಕರಿಗೆ ಕಠಿಣ ಶಿಕ್ಷೆಯ ಕುರಿತು ಮನವರಿಕೆ ಮಾಡಿಕೊಟ್ಟು ಜಾಗೃತಿ ಮೂಡಿಸಲು ಸೂಚಿಸಲಾಯಿತು. ಅಲ್ಲದೇ ಡಿಮಾಂಡ್ ರೂ. 77.63 ಲಕ್ಷ ಇದ್ದು ವಸೂಲಿ ರೂ. 75.65 ಲಕ್ಷ ಆಗಿದ್ದು ರೂ. 1.98 ಲಕ್ಷ ಕಡಿಮೆ ವಸೂಲಾತಿಯಾಗಿರುತ್ತದೆ. ಡಿಮಾಂಡ್‌ನಷ್ಟು ಕಡ್ಡಾಯವಾಗಿ ವಸೂಲಿ ಮಾಡುವಂತೆ ಸೂಚಿಸಲಾಯಿತು.
- ಹುಬ್ಬಳ್ಳಿ ವಲಯದ ಹುಬ್ಬಳ್ಳಿ ವೃತ್ತದಲ್ಲಿ ಹುಬ್ಬಳ್ಳಿ ಗ್ರಾಮೀಣ ವಿಭಾಗದಲ್ಲಿ ರೂ. 0.82 ಲಕ್ಷ ಹಾಗೂ ಧಾರವಾಡ ಗ್ರಾಮೀಣ ವಿಭಾಗದಲ್ಲಿ ರೂ. 3.32 ಲಕ್ಷ ಒಟ್ಟು ರೂ. 4.14 ಲಕ್ಷ ಹಿಂಪಡೆಯುವ ಮೊತ್ತವಿದ್ದು ಸದರಿ ಮೊತ್ತವನ್ನು ಹಿಂಪಡೆಯುವ ಕುರಿತು ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.
- ಬೆಳಗಾವಿ ವಲಯದ ಬಾಗಲಕೋಟ ವಿಭಾಗದಲ್ಲಿ ರೂ. 1.14 ಲಕ್ಷ ಹಿಂಪಡೆಯುವ ಮೊತ್ತವಿದ್ದು ಸದರಿ ಮೊತ್ತವನ್ನು ಹಿಂಪಡೆಯುವ ಕುರಿತು ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.

3. **ಅಜೇಂಡಾ 1ಸಿ : <u>ನವೆಂಬರ್-2012 ರ ಅಂತ್ಯಕ್ಕೆ ಎಲ್.ಟಿ-3 ಜಕಾತಿ ಸ್ಥಾವರಗಳ ಬಾಕಿ ವಸೂಲಾತಿ ಕಂದಾಯ ಕುರಿತು ಚರ್ಚೆ :</u>**

ವೃತ್ತವಾರು ಎಲ್.ಟಿ-3 ಜಕಾತಿಯ ನಿಗದಿತ ವಸೂಲಾತಿ ಗುರಿ, ಬೇಡಿಕೆ, ವಸೂಲಿ, ಬಾಕಿ ವಿವರ :

(Amt in lakhs)

| Name of the Circle | Target | OB | Demand | Colln | Total CB | Court cases | Appeal cases | Withdrawals | Amt. of Long dis inst. | Net CB | Net CB Ratio |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| Belgaum | 449.77 | 131.90 | 435.26 | 449.89 | 117.27 | 2.51 | 40.99 | 1.06 | 8.84 | 63.87 | 0.08 |
| Chikkodi | 150.34 | 88.15 | 146.30 | 187.77 | 46.68 | 3.06 | 0.00 | 0.00 | 17.04 | 26.58 | 0.21 |
| Bijapur | 260.19 | 69.38 | 250.75 | 269.94 | 50.20 | 1.18 | 2.43 | 0.00 | 24.00 | 22.59 | 1.01 |
| Bagalkot | 249.03 | 147.53 | 243.57 | 245.24 | 145.86 | 0.00 | 0.00 | 0.00 | 29.03 | 116.83 | 0.45 |
| **Belgaum Zone** | **1109.33** | **436.96** | **1075.89** | **1152.84** | **360.01** | **6.75** | **43.42** | **1.06** | **78.91** | **229.86** | **1.67** |
| Hubli | 631.00 | 245.34 | 130.46 | 148.53 | 227.27 | 0.00 | 1.24 | 0.64 | 40.61 | 184.78 | 0.24 |
| Haveri | 139.53 | 39.91 | 139.01 | 140.97 | 37.94 | 1.64 | 0.24 | 0.00 | 18.56 | 17.50 | 0.38 |
| Sirsi | 277.12 | 49.61 | 311.36 | 298.13 | 62.85 | 0.00 | 0.05 | 0.00 | 2.52 | 60.28 | 0.08 |
| **Hubli Zone** | **1047.64** | **334.86** | **580.83** | **587.63** | **328.05** | **1.64** | **1.53** | **0.64** | **61.69** | **262.56** | **0.70** |

- ಬೆಳಗಾವಿ ವಲಯದ ಎಲ್ಲಾ ನಾಲ್ಕು ವೃತ್ತಗಳಲ್ಲಿ ಬೇಡಿಕೆಗಿಂತ ಹೆಚ್ಚು ವಸೂಲಾತಿಯಾಗಿದ್ದು ಮುಂದಿನ ತಿಂಗಳಲ್ಲಿ ಇದೇ ರೀತಿ ಗುರಿ ಸಾಧಿಸುವಂತೆ ಸೂಚಿಸಲಾಯಿತು.
- ರಾಯಬಾಗ ವಿಭಾಗದ Net CB Ratio 0.67, ಇಂಡಿ ವಿಭಾಗದ 0.52 ಮತ್ತು ಜಮಖಂಡಿ ವಿಭಾಗದ Net CB Ratio 0.77 ಇದ್ದು ವಸೂಲಾತಿ ಗುರಿ ಸಾಧಿಸಿ Net CB Ratio ಕಡಿಮೆ ಮಾಡಲು ಸೂಚಿಸಲಾಯಿತು.
- ಬೆಳಗಾವಿ ಶಹರ ವಿಭಾಗದ ಬೇಡಿಕೆ ರೂ. 239.17 ಲಕ್ಷ ಇದ್ದು ವಸೂಲಾತಿ ರೂ. 236.66 ಲಕ್ಷ ಹಾಗೂ ಮುಧೋಳ ವಿಭಾಗದ ಬೇಡಿಕೆ ರೂ. 41.04 ಲಕ್ಷ ಇದ್ದು ವಸೂಲಾತಿ ರೂ. 40.70 ಲಕ್ಷ ಆಗಿರುತ್ತದೆ. ಈ

ವಿಭಾಗಗಳಲ್ಲಿ ಬೇಡಿಕೆಯಷ್ಟು ವಸೂಲಾತಿ ಆಗದೇ ಇರುವುದನ್ನು ಗಮನಿಸಿ ಕಡ್ಡಾಯವಾಗಿ ಬೇಡಿಕೆಯಷ್ಟು ವಸೂಲಾತಿ ಮಾಡಲು ವೃತ್ತಾಧಿಕಾರಿಗಳಿಗೆ ಸೂಚಿಸಲಾಯಿತು.

- ಹುಬ್ಬಳ್ಳಿ ವಲಯದ ಹುಬ್ಬಳ್ಳಿ ವೃತ್ತ ಹಾಗೂ ಹಾವೇರಿ ವೃತ್ತದ ಬೇಡಿಕೆಯಷ್ಟು ವಸೂಲಾತಿ ಆಗಿದ್ದು, ಶಿರಸಿ ವೃತ್ತದಲ್ಲಿ ಬೇಡಿಕೆ ರೂ. 311.36 ಲಕ್ಷಕ್ಕೆ ರೂ. 298.13 ಲಕ್ಷ ಆಗಿರುತ್ತದೆ. ರೂ. 13.23 ಲಕ್ಷ ಬೇಡಿಕೆಗಿಂತ ಕಡಿಮೆ ವಸೂಲಾತಿ ಆಗಿದ್ದು ಮುಂದಿನ ಅವಧಿಯಲ್ಲಿ ಕಡ್ಡಾಯವಾಗಿ ಬೇಡಿಕೆಯಷ್ಟು ವಸೂಲಾತಿ ಮಾಡಲು ಸೂಚಿಸಲಾಯಿತು.
- ಹುಬ್ಬಳ್ಳಿ ವಲಯದ ಹುಬ್ಬಳ್ಳಿ ಗ್ರಾಮೀಣ ವಿಭಾಗದಲ್ಲಿ ರೂ. 0.21 ಲಕ್ಷ ಹಾಗೂ ಧಾರವಾಡ ಗ್ರಾಮೀಣ ವಿಭಾಗದಲ್ಲಿ ರೂ. 0.43 ಲಕ್ಷ ಹಿಂಪಡೆಯುವ ಮೊತ್ತವಿದ್ದು ಸದರಿ ಮೊತ್ತವನ್ನು ಹಿಂಪಡೆಯುವ ಕುರಿತು ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.
- ಬೆಳಗಾವಿ ವಲಯದ ಬೆಳಗಾವಿ ಗ್ರಾಮೀಣ ವಿಭಾಗದಲ್ಲಿ ರೂ. 1.06 ಲಕ್ಷ ಹಿಂಪಡೆಯುವ ಮೊತ್ತವಿದ್ದು ಸದರಿ ಮೊತ್ತವನ್ನು ಹಿಂಪಡೆಯುವ ಕುರಿತು ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.
- ಬೆಳಗಾವಿ ವಲಯದ ಬೆಳಗಾವಿ ನಗರ ವಿಭಾಗದಲ್ಲಿ ರೂ. 40.99 ಲಕ್ಷ ಮೇಲ್ಮನವಿ ಮೊತ್ತವಿದ್ದು ಸದರಿ ಮೊತ್ತದ ಕುರಿತು ಸಂಬಂಧಿಸಿದ ಮೇಲ್ಮನವಿ ಪ್ರಾಧಿಕಾರಿಗಳಿಗೆ ಅನುಸರಣೆ ಮಾಡಿ ಶೀಘ್ರ ವಿಲೇವಾರಿ ಮಾಡಲು ಸೂಚಿಸಲಾಗಿದೆ.

4. **ಅಜೇಂಡಾ 1ಡಿ : <u>ನವ್ಹಂಬರ್–2012 ರ ಅಂತ್ಯಕ್ಕೆ ಎಲ್.ಟಿ–5 ಜಕಾತಿ ಸ್ಥಾವರಗಳ ಬಾಕಿ ವಸೂಲಾತಿ ಕಂದಾಯ ಕುರಿತು ಚರ್ಚೆ :</u>**

ವೃತ್ತವಾರು ಎಲ್.ಟಿ–5 ಜಕಾತಿಯ ನಿಗದಿತ ವಸೂಲಾತಿ ಗುರಿ, ಬೇಡಿಕೆ, ವಸೂಲಿ, ಬಾಕಿ ವಿವರ :

(Amt in lakhs)

| Name of the Dvn | Target | OB | Dem and | Coll + Nekar Package dmd | Total CB | Net CB | Net CB Ratio | Court cases | Appeal cases | Withdr awals | Amt. of Long dis instal |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| Belgaum | 396.18 | 426.05 | 365.85 | 370.49 | 465.79 | 56.49 | 0.15 | 31.65 | 4.40 | 0.00 | 32.79 |
| Chikkodi | 153.11 | 249.35 | 121.52 | 127.43 | 260.83 | 33.97 | 0.28 | 0.60 | 1.24 | 0.00 | 96.17 |
| Bijapur | 179.43 | 194.01 | 145.28 | 149.57 | 189.72 | 107.61 | 0.74 | 16.87 | 32.36 | 2.21 | 30.60 |
| Bagalkot | 233.15 | 400.00 | 235.65 | 234.33 | 428.03 | 31.29 | 0.13 | 127.18 | 0.71 | 0.00 | 56.30 |
| **Belgaum Zone** | **961.87** | **1269.41** | **868.29** | **881.83** | **1344.38** | **229.37** | **0.26** | **176.30** | **38.71** | **2.21** | **215.86** |
| Hubli | 358.53 | 265.82 | 102.28 | 111.66 | 261.74 | 152.89 | 1.49 | 3.40 | 10.92 | 11.12 | 42.48 |
| Haveri | 106.31 | 90.36 | 85.83 | 99.47 | 77.68 | 29.40 | 0.34 | 12.09 | 2.76 | 0.00 | 26.20 |
| Sirsi | 104.93 | 30.66 | 103.16 | 101.80 | 32.01 | 10.92 | 0.11 | 1.38 | 2.11 | 0.00 | 17.60 |
| **Hubli Zone** | **569.77** | **386.83** | **291.27** | **312.93** | **371.43** | **193.21** | **0.66** | **16.87** | **15.79** | **11.12** | **86.28** |

- ಬೆಳಗಾವಿ ವಲಯದ ಬೆಳಗಾವಿ, ಚಿಕ್ಕೋಡಿ ಹಾಗೂ ಬಿಜಾಪೂರ ವೃತ್ತಗಳಲ್ಲಿ ಬೇಡಿಕೆಗಿಂತ ಹೆಚ್ಚು ವಸೂಲಾತಿ ಮಾಡಿದ್ದು, ಬಾಗಲಕೋಟ ವೃತ್ತದಲ್ಲಿ ಬೇಡಿಕೆ ರೂ. 235.65 ಲಕ್ಷಕ್ಕೆ ರೂ. 234.33 ಲಕ್ಷ ವಸೂಲಾತಿ ಆಗಿದ್ದು ಬೇಡಿಕೆಗಿಂತ ಕಡಿಮೆ ವಸೂಲಾತಿ ಆಗಿರುತ್ತದೆ. ಮುಂದಿನ ಅವಧಿಯಲ್ಲಿ ಬೇಡಿಕೆಗಿಂತ ಹೆಚ್ಚು ವಸೂಲಾತಿ ಮಾಡಲು ಸೂಚಿಸಲಾಯಿತು.
- ಬೆಳಗಾವಿ ಶಹರ ವಿಭಾಗದ ಬೇಡಿಕೆ ರೂ. 194.58 ಲಕ್ಷಕ್ಕೆ ರೂ. 187.44 ಲಕ್ಷ ವಸೂಲಾತಿ, ಇಂಡಿ ವಿಭಾಗದಲ್ಲಿ ಬೇಡಿಕೆ ರೂ. 34.73 ಲಕ್ಷಕ್ಕೆ ರೂ. 30.64 ಲಕ್ಷ ಆಗಿದ್ದು, ಜಮಖಂಡಿ ವಿಭಾಗದ ರೂ. 83.30 ಲಕ್ಷಕ್ಕೆ ರೂ. 80.45 ಲಕ್ಷ ವಸೂಲಾತಿ ಆಗಿದ್ದು ಡಿಮಾಂಡ್‌ಗಿಂತ ಕಡಿಮೆ ವಸೂಲಾತಿ ಆಗಿದ್ದು ಕಡ್ಡಾಯವಾಗಿ ಡಿಮಾಂಡ್‌ನಷ್ಟು ವಸೂಲಾತಿ ಮಾಡಲು ಸೂಚಿಸಲಾಯಿತು.

- ಬೈಲಹೊಂಗಲ ವಿಭಾಗದ Net CB Ratio 0.79, ರಾಯಬಾಗ ವಿಭಾಗದ 0.98, ಬಿಜಾಪೂರ ವಿಭಾಗದಲ್ಲಿ 0.76, ಇಂಡಿ ವಿಭಾಗದಲ್ಲಿ 0.69 ಹಾಗೂ ಮುಧೋಳ ವಿಭಾಗದಲ್ಲಿ 1.12 ರಷ್ಟು ಇದ್ದು ನಿವ್ವಳ ಶಿಲ್ಕು ವಸೂಲಾತಿ ಮಾಡಿ ಅನುಪಾತವನ್ನು ಕಡಿಮೆ ಮಾಡಲು ಸೂಚಿಸಲಾಯಿತು.
- ಹುಬ್ಬಳ್ಳಿ ವಲಯದ ಹುಬ್ಬಳ್ಳಿ ವೃತ್ತ ಹಾಗೂ ಹಾವೇರಿ ವೃತ್ತದಲ್ಲಿ ಬೇಡಿಕೆಗಿಂತ ಹೆಚ್ಚು ವಸೂಲಾತಿ ಆಗಿದ್ದು, ಶಿರಸಿ ವೃತ್ತದಲ್ಲಿ ಬೇಡಿಕೆ ರೂ. 103.16 ಲಕ್ಷಕ್ಕೆ ವಸೂಲಾತಿ ರೂ. 101.80 ಲಕ್ಷ ಆಗಿದ್ದು ರೂ. 1.36 ಲಕ್ಷ ಕಡಿಮೆ ವಸೂಲಾತಿ ಆಗಿರುತ್ತದೆ. ಬೇಡಿಕೆಗಿಂತ ಹೆಚ್ಚು ವಸೂಲಾತಿ ಮಾಡಲು ಸೂಚಿಸಲಾಯಿತು.
- ಗದಗ ವಿಭಾಗದಲ್ಲಿ ಬೇಡಿಕೆ ರೂ. 44.44 ಲಕ್ಷಕ್ಕೆ ವಸೂಲಾತಿ ರೂ. 42.67 ಲಕ್ಷ ಆಗಿದ್ದು, ಕಾರವಾರ ವಿಭಾಗದ ಬೇಡಿಕೆ ರೂ. 70.78 ಲಕ್ಷಕ್ಕೆ ವಸೂಲಾತಿ ರೂ. 68.89 ಲಕ್ಷ ಆಗಿದ್ದು ಬೇಡಿಕೆಯಷ್ಟು ವಸೂಲಾತಿ ಮಾಡುವಂತೆ ಸೂಚಿಸಲಾಯಿತು.
- ಹುಬ್ಬಳ್ಳಿ ವಲಯದ ಹುಬ್ಬಳ್ಳಿ ಗ್ರಾಮೀಣ ವಿಭಾಗದಲ್ಲಿ ರೂ. 1.32 ಲಕ್ಷ ಹಾಗೂ ಧಾರವಾಡ ಗ್ರಾಮೀಣ ವಿಭಾಗದಲ್ಲಿ ರೂ. 9.80 ಲಕ್ಷ ಒಟ್ಟು ರೂ. 11.21 ಲಕ್ಷ ಹಿಂಪಡೆಯುವ ಮೊತ್ತವಿದ್ದು ಸದರಿ ಮೊತ್ತವನ್ನು ಹಿಂಪಡೆಯುವ ಕುರಿತು ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.
- ಬೆಳಗಾವಿ ವಲಯದ ಬಿಜಾಪೂರ ವಿಭಾಗದಲ್ಲಿ ರೂ. 2.21 ಲಕ್ಷ ಹಿಂಪಡೆಯುವ ಮೊತ್ತವಿದ್ದು ಸದರಿ ಮೊತ್ತವನ್ನು ಹಿಂಪಡೆಯುವ ಕುರಿತು ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.

5. **ಅಜೇಂಡಾ 1(ಇ)/(ಎಫ್)/(ಜಿ) : ನವ್ಹೆಂಬರ್-2012 ರ ಅಂತ್ಯಕ್ಕೆ ಹೆಚ್.ಟಿ-2 (ಎ), ಹೆಚ್.ಟಿ-2(ಬಿ) ಹಾಗೂ ಹೆಚ್.ಟಿ-4 ಜಕಾತಿ ಸ್ಥಾವರಗಳ ಕಂದಾಯ ಬಾಕಿ ವಸೂಲಾತಿ ಕುರಿತು ಚರ್ಚೆ :**

(Amt in lakhs)

| Name of the Circle | HT-2 (a) | | | HT-2 (b) | | | HT-4 | | |
|---|---|---|---|---|---|---|---|---|---|
| | Demand | Coll | Total CB | Demand | Coll | Total CB | Demand | Coll | Total CB |
| 1 | 2 | 3 | 4 | 5 | 6 | 7 | 8 | 9 | 10 |
| Belgaum | 2172.24 | 2114.35 | 147.88 | 162.01 | 150.49 | 28.74 | 30.74 | 29.76 | 8.31 |
| Chikkodi | 53.87 | 52.99 | 13.41 | 6.59 | 6.59 | 0.00 | 0.91 | 2.00 | 3.56 |
| Bijapur | 45.62 | 53.88 | 18.98 | 108.75 | 107.90 | 15.31 | 2.55 | 2.09 | 8.87 |
| Bagalkot | 734.10 | 759.59 | 272.49 | 40.42 | 53.30 | 112.59 | 3.39 | 2.13 | 6.96 |
| **Belgaum Zone** | **3005.83** | **2980.81** | **452.76** | **317.77** | **318.28** | **156.64** | **37.60** | **35.98** | **27.69** |
| Hubli | 532.54 | 523.69 | 36.65 | 11.62 | 25.24 | 4.69 | 0.24 | 0.50 | 0.27 |
| Haveri | 262.09 | 266.37 | -11.94 | 16.57 | 14.71 | 9.44 | 7.11 | 5.16 | 4.81 |
| Sirsi | 926.50 | 251.61 | 2317.10 | 66.46 | 594.38 | 37.76 | 14.40 | 18.65 | -1.11 |
| **Hubli Zone** | **1721.13** | **1041.67** | **2341.81** | **94.65** | **634.32** | **51.88** | **21.75** | **24.31** | **3.97** |

- ಹೆಚ್.ಟಿ-2 (ಎ), ಹೆಚ್.ಟಿ-2 (ಬಿ) ಹಾಗೂ ಹೆಚ್.ಟಿ-4 ಜಕಾತಿ ಸ್ಥಾವರಗಳಲ್ಲಿ ಬೇಡಿಕೆಯಷ್ಟು ವಸೂಲಾತಿಯಾಗದೇ ಇರುವ ವಿಭಾಗವಾರು ಸ್ಥಾವರವಾರು ಮಾಹಿತಿಯನ್ನು ಹಾಗೂ ವಸೂಲಾತಿಯಾಗದೇ ಇರುವುದಕ್ಕೆ ವಿವರಣೆ ಸಮೇತ 3 ದಿನಗಳ ಒಳಗೆ ವರದಿ ಸಲ್ಲಿಸಲು ಎರಡೂ ವಲಯದ ಮುಖ್ಯ ಇಂಜಿನೀಯರ್ (ವಿ) ರವರಿಗೆ ಸೂಚಿಸಲಾಯಿತು.
- ಘಟಪ್ರಭಾ ವಿಭಾಗದಲ್ಲಿ ಹೆಚ್.ಟಿ-2 (ಎ) ಜಕಾತಿಯಲ್ಲಿ ಬೇಡಿಕೆ ರೂ. 557.93 ಲಕ್ಷ ಇದ್ದು ವಸೂಲಾತಿ ರೂ. 506.52 ಲಕ್ಷ ಆಗಿದ್ದು ರೂ. 51.41 ಲಕ್ಷದಷ್ಟು ಕಡಿಮೆ ವಸೂಲಾತಿ ಆಗಿದ್ದನ್ನು ಗಂಭೀರವಾಗಿ ಪರಿಗಣಿಸಿ ಸ್ಥಾವರಕ್ಕೆ ವಿದ್ಯುತ್ ನಿಲುಗಡೆ ಮಾಡಲು ವಿಫಲರಾದಂತಹ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ) ರವರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲು ವಲಯದ ಮುಖ್ಯ ಇಂಜಿನೀಯರ್ (ವಿ) ರವರಿಗೆ ಸೂಚಿಸಿದರು.

- ಬಾಗಲಕೋಟೆ ವಿಭಾಗದ ಹೆಚ್.ಟಿ-2 (ಎ) ಜಕಾತಿಯಲ್ಲಿ ಬೇಡಿಕೆ ರೂ. 575.78 ಲಕ್ಷ ಇದ್ದು ವಸೂಲಾತಿ ರೂ. 544.05 ಲಕ್ಷ ಆಗಿದ್ದು ಬೇಡಿಕೆಯಷ್ಟು ವಸೂಲಾತಿ ಆಗದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ ಇದರ ಬಗ್ಗೆ ವರದಿ ಕೊಡಲು ಅಧೀಕ್ಷಕ ಇಂಜಿನೀಯರ್ (ವಿ) ಬಾಗಲಕೋಟೆ ರವರಿಗೆ ಸೂಚಿಸಲಾಯಿತು.
- ಧಾರವಾಡ ಗ್ರಾಮೀಣ ವಿಭಾಗದ ಹೆಚ್.ಟಿ-2 (ಎ) ಜಕಾತಿಯ ಬೇಡಿಕೆ ರೂ. 399.19 ಲಕ್ಷ ಇದ್ದು ವಸೂಲಾತಿ ರೂ. 369.32 ಲಕ್ಷ ಆಗಿದ್ದು ರೂ. 29.87 ಲಕ್ಷ ಬೇಡಿಕೆಗಿಂತ ಕಡಿಮೆ ವಸೂಲಾತಿ ಆಗಿರುವುದಕ್ಕೆ ಅಧೀಕ್ಷಕ ಇಂಜಿನೀಯರ್ (ವಿ) ಹುಬ್ಬಳ್ಳಿ ವೃತ್ತ ಇವರಿಗೆ ವರದಿ ಸಲ್ಲಿಸಲು ಸೂಚಿಸಲಾಯಿತು.
- ಕಾರವಾರ ವಿಭಾಗದ ಹೆಚ್.ಟಿ-2 ಜಕಾತಿಯ ಬೇಡಿಕೆ ರೂ. 797.52 ಲಕ್ಷಕ್ಕೆ ವಸೂಲಾತಿ ರೂ. 119.42 ಲಕ್ಷ ಮಾತ್ರ ಆಗಿದ್ದು ಇದು ಬೇಡಿಕೆಗಿಂತ ರೂ. 678.10 ಲಕ್ಷ ಕಡಿಮೆ ವಸೂಲಾತಿಯಾಗಿದ್ದು ಇದು ಸೋಲಾರಿಸ್ ಕೆಮಿಕಲ್ಸ್ ಸ್ಥಾವರದ ಬಾಕಿ ಇದ್ದು ವಿದ್ಯುತ್ ನಿಲುಗಡೆ ಮಾಡಿದ್ದರ ಬಗ್ಗೆ ಹಾಗೂ ವಸೂಲಾತಿ ಮಾಡದೇ ಇರುವುದಕ್ಕೆ ವರದಿ ಸಲ್ಲಿಸಲು ವೃತ್ತಾಧಿಕಾರಿಗಳಿಗೆ ಸೂಚಿಸಲಾಯಿತು.
- ಬೆಳಗಾವಿ ಶಹರ ವಿಭಾಗದ ಹೆಚ್.ಟಿ-2 (ಬಿ) ಜಕಾತಿಯಲ್ಲಿ ಬೇಡಿಕೆ ರೂ. 140.45 ಲಕ್ಷಕ್ಕೆ ವಸೂಲಾತಿ ರೂ. 128.45 ಲಕ್ಷ ಆಗಿದ್ದು ರೂ. 12.00 ಲಕ್ಷ ಬೇಡಿಕೆಗಿಂತ ಕಡಿಮೆ ವಸೂಲಾತಿಯಾಗಿದ್ದು ಇದು ಸುವರ್ಣ ಸೌಧಕ್ಕೆ ಸಂಬಂಧಪಟ್ಟ ಬಾಕಿ ಇರುವುದೆಂದು ತಿಳಿಸಲಾಗಿದ್ದು ಇದರ ಬಗ್ಗೆ ಪತ್ರ ವ್ಯವಹಾರ ಮಾಡಿ ಬಾಕಿ ವಸೂಲಾತಿಗೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಲಾಯಿತು.

6. **<u>ವಸೂಲಾತಿ ಗುರಿ ನಿಗದಿ ಪಡಿಸುವ ಕುರಿತು :</u>**

- ಡಿಸೆಂಬರ್-2012 ನೇ ತಿಂಗಳಿನ ಕಂದಾಯ ಪರಿಶೀಲನಾ ಸಭೆಗೆ ವಸೂಲಾತಿ ಗುರಿ ನಿಗದಿ ಪಡಿಸುವ ಕುರಿತು ಚರ್ಚಿಸಲಾಯಿತು. ಜನೇವರಿ-2013 ರಲ್ಲಿ ಜರುಗುವ ಡಿಸೆಂಬರ್-2012 ರ ಪ್ರಗತಿ ಪರಿಶೀಲನಾ ಸಭೆಗೆ ಡಿಸೆಂಬರ್-2012 ರ ಬೇಡಿಕೆ ಮತ್ತು ಶೇ. 5 ರಷ್ಟು ಅಂತಿಮ ಶಿಲ್ಕು ಮತ್ತು ಶೇ. 5 ರಷ್ಟು ದೀರ್ಘಕಾಲದಿಂದ ವಿದ್ಯುತ್ ನಿಲುಗಡೆ ಹೊಂದಿದ ಬಾಕಿಯ ಮೊತ್ತ ಇವೆಲ್ಲವನ್ನು ಸೇರಿಸಿ ವಸೂಲಾತಿ ಗುರಿ ನಿಗದಿ ಪಡಿಸಲು ಸೂಚಿಸಲಾಯಿತು.
- ಕಂದಾಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಯಾವ ತಿಂಗಳಿನ ಪ್ರಗತಿ ಪರಿಶೀಲನೆಯಾಗುತ್ತಿದೆಯೋ ಅದೇ ತಿಂಗಳಿನ ಬೇಡಿಕೆ ಮತ್ತು ಶೇ. 5 ರಷ್ಟು ನಿವ್ವಳ ಅಂತಿಮ ಶಿಲ್ಕು ಹಾಗೂ ಶೇ. 5 ರಷ್ಟು ಲಾಂಗ್‌ಡಿಸ್ ಬಾಕಿ ಮೊತ್ತ ಇವೆಲ್ಲವುಗಳನ್ನು ಸೇರಿಸಿ ಗುರಿ ನಿಗದಿ ಪಡಿಸಲು ಸೂಚಿಸಲಾಯಿತು.
- ನಿಗದಿ ಪಡಿಸಿದ ಕಂದಾಯ ವಸೂಲಾತಿ ಗುರಿಯನ್ನು ಕಡ್ಡಾಯವಾಗಿ ವಸೂಲಾತಿ ಮಾಡಿ ಗುರಿ ಸಾಧಿಸುವಂತೆ ಕಟ್ಟು ನಿಟ್ಟಿನ ಸೂಚನೆ ನೀಡಲಾಯಿತು. ವಸೂಲಾತಿ ಗುರಿ ತಲುಪದೇ ಇದ್ದಲ್ಲಿ ತಪ್ಪಿತಸ್ಥ ಮುಖ್ಯ ಇಂಜಿನೀಯರ್ (ವಿ)/ಅಧೀಕ್ಷಕ ಇಂಜಿನೀಯರ್ (ವಿ)/ಕಾರ್ಯನಿರ್ವಾಹಕ ಇಂಜಿನೀಯರ್ (ವಿ)/ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ) ರವರುಗಳ ಮೇಲೆ ಕರ್ತವ್ಯ ಲೋಪವೆಂದು ಪರಿಗಣಿಸಿ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಯಿತು.

7. **<u>ಜಾಗೃತ ದಳದ ಸಂಜ್ಞಾ ಮತ್ತು ಅಸಂಜ್ಞಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಿಂಬಾಕಿ ವಸೂಲಾತಿ ಮಾಡುವ ಕುರಿತು ಚರ್ಚೆ</u>** :

ನವ್ಹಂಬರ್-2012 ರ ಅಂತ್ಯಕ್ಕೆ ಸಂಜ್ಞಾ ಮತ್ತು ಅಸಂಜ್ಞಾ ಪ್ರಕರಣಗಳು ಒಳಗೊಂಡ ಹಿಂಬಾಕಿ ವಿವರ :

(Amt in lakhs)

| Sl.No | Name of Circle | Cognizable cases | | | Non-Cognizable cases | |
|---|---|---|---|---|---|---|
| | | No of cases | BBC amt | Compdg amt | No of cases | BBC amt |
| 1 | Belgaum | 121 | 340.12 | 128.60 | 52 | 7.20 |
| 2 | Chikkodi | 277 | 164.92 | 24.01 | 6 | 0.80 |
| 3 | Bijapur | 207 | 48.54 | 8.92 | 39 | 22.76 |
| 4 | Bagalkot | 766 | 85.83 | 8.98 | 69 | 16.17 |
| BGM Zone | | 1371 | 639.41 | 170.51 | 166 | 46.93 |

| | | | | | | |
|---|---|---|---|---|---|---|
| 1 | Hubli | 135 | 41.09 | 13.12 | 351 | 90.89 |
| 2 | Haveri | 276 | 59.77 | 14.90 | 376 | 84.37 |
| 3 | Sirsi | 8 | 1.77 | 0.41 | 158 | 18.43 |
| | HBL Zone | 419 | 102.63 | 28.43 | 885 | 193.69 |

- ಬೆಳಗಾವಿ ವಲಯದ 1371 ಸಂಜ್ಞಾ ಪ್ರಕರಣಗಳ ಮೊತ್ತ ರೂ. 639.41 ಲಕ್ಷ ಹುಬ್ಬಳ್ಳಿ ವಲಯದ 419 ಸಂಜ್ಞಾ ಪ್ರಕರಣಗಳ ಮೊತ್ತ ರೂ. 102.63 ಲಕ್ಷ ಬಾಕಿ ಇದ್ದು ಅಕ್ವಿಟ್/ಕನ್ವಿಕ್ಟ್ ಆಗಿರುವುದರ ಕುರಿತು ಪರಿಶೀಲಿಸಿ ಹಿಂದಾಕರಣೆ ಮೊತ್ತ ವಸೂಲಿ ಮಾಡುವಂತೆ ಸೂಚಿಸಲಾಯಿತು.
- ಬೆಳಗಾವಿ ವಲಯದ 166 ಅಸಂಜ್ಞಾ ಪ್ರಕರಣಗಳಲ್ಲಿ ರೂ. 46.93 ಲಕ್ಷ ಹುಬ್ಬಳ್ಳಿ ವಲಯದ 885 ಸಂಜ್ಞಾ ಪ್ರಕರಣಗಳಲ್ಲಿ ರೂ. 193.69 ಲಕ್ಷ ಇದ್ದು ಪ್ರಕರಣವಾರು ವಿಮರ್ಶಿಸಿ ಡಿಮಾಂಡ್ ಮಾಡಿರುವ ಕುರಿತು ಖಚಿತ ಪಡಿಸಿಕೊಂಡು ವಸೂಲಾತಿ ಮಾಡಲು ಸೂಚಿಸಲಾಯಿತು.
- ಜಾಗೃತದಳದ ಚಟುವಟಿಕೆಗಳನ್ನು ಸಮಗ್ರವಾಗಿ ಉತ್ತೇಜಿಸುವ ಕ್ರಮದ ಅಗತ್ಯತೆ ಇರುವುದನ್ನು ಮನಗಂಡು ಪ್ರತಿ ತಿಂಗಳು 15 ರಿಂದ 25 ನೇ ತಾರೀಖಿನೊಳಗೆ ವಿಭಾಗವಾರು ಜಾಗೃತದಳದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಜಾಗೃತದಳದ ಅಧಿಕಾರಿಗಳು, ಕಾರ್ಯ ಮತ್ತು ಪಾಲನೆ ವಿಭಾಗದ ಅಧಿಕಾರಿಗಳು ಒಟ್ಟಾಗಿ ಕಾರ್ಯಯೋಜನೆ ಹಮ್ಮಿಕೊಂಡು ವಿದ್ಯುತ್ ಕಳ್ಳತನ ಪತ್ತೆ ಹಚ್ಚುವಲ್ಲಿ ಹಾಗೂ ಹಿಂಬಾಕಿ ವಸೂಲಾತಿಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡು ಪ್ರಗತಿ ಸಾಧಿಸಲು ಸೂಚಿಸಲಾಯಿತು.
- ಅಧೀಕ್ಷಕ ಇಂಜಿನೀಯರ್ (ವಿ) ಹಾಗೂ ಮುಖ್ಯ ಇಂಜಿನೀಯರ್ (ವಿ) ರವರು ವಿದ್ಯುತ್ ಸೋರಿಕೆಯ ಪ್ರಕರಣಗಳ ಕುರಿತು ಸಮಗ್ರವಾಗಿ ಮಾಹಿತಿ ಸಂಗ್ರಹಿಸಿ ಪೂರ್ವ ಸಿದ್ಧತೆಯಲ್ಲಿದ್ದು ಜಾಗೃತದಳದವರೊಂದಿಗೆ ಸಹಕರಿಸಲು ಸೂಚಿಸಲಾಯಿತು.
- ಜನೇವರಿ-2013 ರ ಮೊದಲನೇ ವಾರದಲ್ಲಿ ಜಾಗೃತದಳದ ಇನ್ಸಪೆಕ್ಟರ್‌ರುಗಳನ್ನೊಳಗೊಂಡು ಕಂಪನಿಯ ಅಧಿಕಾರಿ/ಸಿಬ್ಬಂದಿಯವರೊಂದಿಗೆ ವಿದ್ಯುತ್ ಸೋರಿಕೆಯ ಕುರಿತು ಸಭೆ ನಡೆಸಿ "ಒಂದು ವಾರ ವಿಶೇಷ ಜಾಗೃತದಳದ ವಸೂಲಾತಿ ಆಂಧೋಲನ" ವನ್ನು ನಡೆಸುವಂತೆ ಸೂಚಿಸಲಾಯಿತು.
- ಜಾಗೃತದಳದ ಅಧಿಕಾರಿಗಳಿಗೆ ಸಂಜ್ಞಾ ಪ್ರಕರಣಗಳ ಪಂಚನಾಮ ಮಾಡಿದ ಪ್ರತಿಯನ್ನು ಕಡ್ಡಾಯವಾಗಿ ಉಪವಿಭಾಗ/ ವಿಭಾಗಕ್ಕೆ ಕಳುಹಿಸಿಕೊಡುವಂತೆ ಸೂಚಿಸಲಾಯಿತು.

8. ದಿನಾಂಕ : 28-11-2012 ರಂದು ಜರುಗಿದ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳಿಗೆ ಕಂಡಿಕೆವಾರು ಅನುಸರಣೆ ಮಾಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ ಶಿರಸಿ ವೃತ್ತದ ಅಧಿಕಾರಿಗಳನ್ನು ಹೊರತುಪಡಿಸಿ ಉಳಿದ ವಲಯ/ವೃತ್ತದ ಮುಖ್ಯ ಇಂಜಿನೀಯರ್ (ವಿ)/ನಿಯಂತ್ರಣಾಧಿಕಾರಿ/ಅಧೀಕ್ಷಕ ಇಂಜಿನೀಯರ್/ ಉಪಲೆಕ್ಕನಿಯಂತ್ರಣಾಧಿಕಾರಿ ರವರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲು ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂಅ) ರವರಿಗೆ ಸೂಚಿಸಲಾಯಿತು.

- ಪ್ರತಿ ತಿಂಗಳು ನಿಗದಿ ಪಡಿಸಿದ ಕಂದಾಯ ವಸೂಲಾತಿ ಗುರಿಯನ್ನು ಮಾರ್ಗದಾಳುಗಳಿಂದ ಹಿಡಿದು ಕಾರ್ಯನಿರ್ವಾಹಕ ಇಂಜಿನೀಯರ್ (ವಿ) ರವರೆಗೂ ಹಂಚಿಕೆ ಮಾಡಿದ ಆದೇಶದ ಪ್ರತಿಯನ್ನು ಪ್ರತಿ ತಿಂಗಳ 10 ನೇ ತಾರೀಖಿನೊಳಾಗಿ ವಲಯದ ಮುಖ್ಯ ಇಂಜಿನೀಯರ್ (ವಿ) ರವರು ಕಂಪನಿ ಕಛೇರಿಗೆ ಕಳುಹಿಸಿಕೊಡಲು ಕಟ್ಟುನಿಟ್ಟಿನ ಆದೇಶ ನೀಡಲಾಯಿತು.

9. ದಿನಾಂಕ : 28-11-2012 ರಂದು ಜರುಗಿದ ಕಂದಾಯ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳಲ್ಲಿ ನಿಯಂತ್ರಣಾಧಿಕಾರಿ/ಉಪಲೆಕ್ಕನಿಯಂತ್ರಣಾಧಿಕಾರಿ/ಲೆಕ್ಕಾಧಿಕಾರಿ ರವರಿಗೆ ತಮ್ಮ ಕರ್ತವ್ಯದೊಂದಿಗೆ ಕಂದಾಯ ವಸೂಲಾತಿಯ ಹೆಚ್ಚುವರಿ ಕಾರ್ಯನಿರ್ವಹಿಸಿ ವರದಿ ಕೊಡಲು ಸೂಚಿಸಿದ್ದರೂ ಯಾರೊಬ್ಬರೂ ವರದಿ ಕೊಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ 3 ದಿನಗಳೊಳಗೆ ವರದಿ ಸಲ್ಲಿಸಲು ಸೂಚಿಸಲಾಯಿತು.

10. ಸರ್ಕಾರಿ ಸ್ವಾಮ್ಯದ ಸ್ಥಾವರಗಳ ವಿದ್ಯುತ್ ಬಾಕಿ ವಸೂಲಾತಿ ಕುರಿತು ಆಯಾ ಸಂಸ್ಥೆಗಳ ಮುಖ್ಯಾಧಿಕಾರಿಗಳಿಗೆ ಪತ್ರ ವ್ಯವಹರಿಸಿ ಸಾಕಷ್ಟು ಪತ್ರ ವ್ಯವಹಾರದ ನಂತರವು ಬಾಕಿ ಪಾವತಿಸದೇ ಇದ್ದಲ್ಲಿ ಅಂತಿಮವಾಗಿ ದಿನಾಂಕ ನಿಗದಿ ಪಡಿಸಿದ ಅವಧಿಯೊಳಗಾಗಿ ಕಂದಾಯ ಪಾವತಿಯಾಗದೇ ಇದ್ದಲ್ಲಿ ವಿದ್ಯುತ್ ನಿಲುಗಡೆಗೊಳಿಸಿ ವಸೂಲಾತಿ ಕ್ರಮ ಜರುಗಿಸಲು ಸೂಚಿಸಲಾಯಿತು.

11. **ಆಂತರಿಕ ಪರಿಶೋಧನೆಯವರು ಕಂದಾಯ ಕೊರತೆ ವಸೂಲಾತಿ ಕುರಿತು** :

ನವ್ಹಂಬರ್-2012 ರ ಅಂತ್ಯಕ್ಕೆ ವಸೂಲಾತಿ ಮಾಡಬೇಕಾದ ಕಂದಾಯ ಕೊರತೆ ಮೊತ್ತದ ವಿವರ :

(Amt in lakhs)

| SL | Name of the Circle | Opening Bal | Pointed out | Total | Recovery | Closing Balance (Breakup) | | |
|---|---|---|---|---|---|---|---|---|
| | | | | | | Recoverable | Long Disconnected | Others |
| 1 | Belgaum | 32.35 | 49.14 | 81.49 | 8.61 | 66.45 | 0.68 | 5.75 |
| 2 | Chikkodi | 12.39 | 18.35 | 30.73 | 13.14 | 14.89 | 1.05 | 1.65 |
| 3 | Bijapur | 52.61 | 7.06 | 59.67 | 5.71 | 40.74 | 10.21 | 3.01 |
| 4 | Bagalkot | 59.20 | 15.16 | 74.36 | 10.91 | 59.38 | 3.27 | 0.81 |
| **Belgaum Zone** | | **156.56** | **89.70** | **246.25** | **38.37** | **181.45** | **15.21** | **11.23** |
| 5 | Hubli | 47.00 | 21.33 | 68.33 | 13.92 | 48.03 | 2.97 | 3.41 |
| 6 | Haveri | 36.68 | 12.66 | 49.34 | 12.08 | 36.40 | 0.15 | 0.70 |
| 7 | Sirsi | 7.18 | 4.94 | 12.12 | 2.45 | 8.55 | 0.14 | 0.97 |
| **Hubli Zone** | | **90.86** | **38.93** | **129.79** | **28.45** | **92.98** | **3.26** | **5.09** |
| **HESCOM** | | **247.41** | **128.63** | **376.04** | **66.82** | **274.43** | **18.47** | **16.32** |

- ಬೆಳಗಾವಿ ವಲಯದ ವಸೂಲಾತಿ ಆಗಬೇಕಾದ ಕಂದಾಯ ಕೊರತೆಯ ಮೊತ್ತ ರೂ. 181.45 ಲಕ್ಷ ಹಾಗೂ ಹುಬ್ಬಳ್ಳಿ ವಲಯದ ರೂ. 92.98 ಲಕ್ಷ ಇದ್ದು ಸಂಪೂರ್ಣವಾಗಿ ವಸೂಲಾತಿ ಮಾಡುವಂತೆ ಸೂಚಿಸಲಾಯಿತು.

12. ದಿನಾಂಕ : 28-11-2012 ರ ಸಭೆಯ ನಡಾವಳಿಗಳ ಪತ್ರದ ಜೊತೆಗೆ ಕಂದಾಯ ವಸೂಲಿಗೆ ಸಂಬಂಧಪಟ್ಟ ಅನುಬಂಧ-1, 2, 3 ಹಾಗೂ 4 ನ್ನು ಲಗತ್ತಿಸಿ ಮಾಹಿತಿಯನ್ನು ಭರ್ತಿ ಮಾಡಿ ಕೊಡುವಂತೆ ಸೂಚಿಸಿದ್ದರೂ, ಎರಡು ವಲಯದಿಂದ ಕ್ರೊಢೀಕೃತ ಸಮರ್ಪಕ, ಸಂಪೂರ್ಣ ವರದಿ ಕೊಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ ಮುಂದಿನ ಅವಧಿಯ ಮಾಹಿತಿಯನ್ನು 10 ನೇ ತಾರೀಖಿನೊಳಗಾಗಿ ಸಲ್ಲಿಸುವಂತೆ ಸೂಚಿಸಲಾಯಿತು. ಹುಬ್ಬಳ್ಳಿ ವಲಯದಿಂದ ಕ್ರೊಢೀಕೃತ ಮಾಹಿತಿಯು ವಿಳಂಬವಾಗಿ ಬಂದಿದ್ದು ಅನುಬಂಧವಾರು ಸಮರ್ಪಕ/ಸಂಪೂರ್ಣ ಮಾಹಿತಿ ಇರದೇ ಇರುವುದು ಕಂಡು ಬಂದಿದೆ. ಸಲ್ಲಿಸುವ ಮಾಹಿತಿಯು ನೈಜವಾಗಿರಬೇಕು ಮತ್ತು ಸಮರ್ಪಕವಾಗಿರಬೇಕು ಹಾಗೂ ಡಿ.ಸಿ.ಬಿ. ಗೆ ತಾಳೆಯಾಗುತ್ತಿರಬೇಕು. ಅಸಮರ್ಪಕ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದೆ ಜರುಗಿಸುವ ಕ್ರಮಕ್ಕೆ ವಲಯ/ವೃತ್ತದ ಅಧಿಕಾರಿಗಳೇ ಜವಾಬ್ದಾರರಾಗುತ್ತಾರೆ ಎಂದು ತಿಳಿಸಲಾಯಿತು.

13. **ಹಿಂಪಡೆಯುವ ಪ್ರಕರಣಗಳ ಕುರಿತು** :

- ಹುಬ್ಬಳ್ಳಿ ವಲಯದಲ್ಲಿ ಎಲ್ ಟಿ-1 ಜಕಾತಿಯಲ್ಲಿ ರೂ 59.57 ಲಕ್ಷ, ಎಲ್ ಟಿ-2 ಜಕಾತಿಯಲ್ಲಿ ರೂ 4.14 ಲಕ್ಷ, ಎಲ್.ಟಿ-3 ಜಕಾತಿಯಲ್ಲಿ ರೂ 0.64 ಲಕ್ಷ, ಹಾಗೂ ಎಲ್ ಟಿ-5 ಜಕಾತಿಯಲ್ಲಿ ರೂ 11.12 ಲಕ್ಷ, ಕಂದಾಯ ಹಿಂಪಡೆಯುವ ಮೊತ್ತವೆಂದು ತೋರಿಸಿದ್ದು, ಈ ಮೊತ್ತವನ್ನು ಹಿಂಪಡೆಯುವ ಕುರಿತು ಸೂಕ್ತ ಕಾರಣಗಳು ಹಾಗೂ ಹಿಂಪಡೆಯಲು ಔಪಚಾರಿಕ ಅನುಮೋದನೆ ನೀಡಿದ ಸಂಬಂಧಪಟ್ಟ ಪ್ರಾಧಿಕಾರಿಯ ಕಛೇರಿ ಜ್ಞಾಪನಾ ಪತ್ರ/ಇತರೆ ಆದೇಶಗಳ ಸಂಪೂರ್ಣ ಮಾಹಿತಿಯನ್ನು ನಿಗಮ ಕಛೇರಿಗೆ ಸಲ್ಲಿಸುವುದು.
- ಬೆಳಗಾವಿ ವಲಯದಲ್ಲಿ ಎಲ್.ಟಿ-2 ಜಕಾತಿಯಲ್ಲಿ ರೂ. 1.14 ಲಕ್ಷ, ಎಲ್.ಟಿ-3 ಜಕಾತಿಯಲ್ಲಿ ರೂ. 1.06 ಲಕ್ಷ ಹಾಗೂ ಎಲ್.ಟಿ-5 ಜಕಾತಿಯಲ್ಲಿ ರೂ. 2.21 ಲಕ್ಷ ಹಿಂಪಡೆಯುವ ಮೊತ್ತವೆಂದು ತೋರಿಸಿದ್ದು, ಈ ಮೊತ್ತವನ್ನು ಹಿಂಪಡೆಯುವ ಕುರಿತು ಸೂಕ್ತ ಕಾರಣಗಳು ಹಾಗೂ ಹಿಂಪಡೆಯಲು ಔಪಚಾರಿಕ ಅನುಮೋದನೆ ನೀಡಿದ

ಸಂಬಂಧಪಟ್ಟ ಪ್ರಾಧಿಕಾರಿಯ ಕಛೇರಿ ಜ್ಞಾಪನಾ ಪತ್ರ/ಆದೇಶಗಳ ಸಂಪೂರ್ಣ ಮಾಹಿತಿಯನ್ನು ನಿಗಮ ಕಛೇರಿಗೆ ಸಲ್ಲಿಸುವುದು.

**14. ದೀರ್ಘಕಾಲದಿಂದ ವಿದ್ಯುತ್ ನಿಲುಗಡೆ ಹೊಂದಿದ ಸ್ಥಾವರಗಳ ಕಂದಾಯ ಬಾಕಿ ಕುರಿತು :**

➢ ದಿನಾಂಕ : 28-11-2012 ರಂದು ನಡೆದ ಕಂದಾಯ ಪರಿಶೀಲನಾ ಸಭೆಯಲ್ಲಿ ಸೂಚಿಸಿದಂತೆ ವಲಯದ ನಿಯಂತ್ರಾಧಿಕಾರಿಗಳು, ವೃತ್ತದ ಉಪಲೆಕ್ಕನಿಯಂತ್ರಣಾಧಿಕಾರಿಗಳು ಹಾಗೂ ವಿಭಾಗದ ಲೆಕ್ಕಾಧಿಕಾರಿಗಳು ದೀರ್ಘ ಕಾಲದಿಂದ ವಿದ್ಯುತ್ ನಿಲುಗಡೆ ಹೊಂದಿದ ಸ್ಥಾವರಗಳ ಕಂದಾಯ ಬಾಕಿ ವಸೂಲಾತಿಗಾಗಿ ತೆಗೆದುಕೊಂಡ ಕ್ರಮದ ಸಂಪೂರ್ಣ ವಿವರಣೆಯನ್ನು ನಿಗದಿತ ನಮೂನೆಯಲ್ಲಿ ದಾಖಲಿಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ತತ್ಸಂಬಂಧ ಹುಬ್ಬಳ್ಳಿ/ಬೆಳಗಾವಿ ವಲಯದ ಮಾಹಿತಿಯನ್ನು ಈ-ಮೇಲ್ ಮೂಲಕ ಸಲ್ಲಿಸಲಾಗಿದ್ದು ಅದನ್ನು ಪರಿಶೀಲಿಸಲಾಗಿ ಮಾಹಿತಿಯು ಅಪೂರ್ಣವಾಗಿರುವುದು ಕಂಡು ಬಂದಿರುತ್ತದೆ. ಸಂಪೂರ್ಣವಾಗಿ ಎಲ್ಲ ಅಂಕಣಗಳನ್ನು ಭರ್ತಿ ಮಾಡಿ ಸಮರ್ಪಕವಾದ ಮಾಹಿತಿಯನ್ನು ವಸೂಲಾತಿ ದಕ್ಷತೆಯಲ್ಲಿನ ಮಾಹಿತಿಗೆ ತಾಳೆ ನೋಡಿ ಸಲ್ಲಿಸಲಾಗಿಲ್ಲ ಈ ನ್ಯೂನತೆಗಳನ್ನು ಸರಿಪಡಿಸಿ ಸಮರ್ಪಕ ಮಾಹಿತಿಯನ್ನು ಸಲ್ಲಿಸಲು ಸೂಚಿಸಲಾಯಿತು.

ಮೇಲಿನ ಅಂಶಗಳಿಗೆ ಕಂಡಿಕೆವಾರು ಅನುಸರಣಾ ವರದಿಯನ್ನು ಪತ್ರ ತಲುಪಿದ ಒಂದು ವಾರದೊಳಗೆ ಸಲ್ಲಿಸುವುದು. ಹಾರಿಕೆ ಅನುಸರಣೆಗಳನ್ನು ಒಪ್ಪಲಾಗುವುದಿಲ್ಲ.

[ಕರಡು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ]

**ಆರ್ಥಿಕ ಸಲಹೆಗಾರರು,**

16.1.13

**ಪ್ರತಿಯನ್ನು ಮಾಹಿತಿ ಹಾಗೂ ಕಟ್ಟುನಿಟ್ಟಿನ ಅನುಸರಣೆಗಾಗಿ :**

1. ಮುಖ್ಯ ಇಂಜಿನೀಯರ್ (ವಿ)/ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ವಲಯ, ಹು.ವಿ.ಸ.ಕಂ.ನಿ., ಬೆಳಗಾವಿ/ಹುಬ್ಬಳ್ಳಿ.
2. ಪೋಲೀಸ್ ಅಧೀಕ್ಷಕರು, ಜಾಗೃತ ದಳ, ಹೆಸ್ಕಾಂ, ವೀಣಾ ಪ್ಲಾಜಾ, ಉಣಕಲ್, ಹುಬ್ಬಳ್ಳಿ.
3. ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂಅ)/ತಾಂತ್ರಿಕ, ನಿಗಮ ಕಛೇರಿ, ಹು.ವಿ.ಸ.ಕಂ.ನಿ. ಹುಬ್ಬಳ್ಳಿ.
4. ನಿಯಂತ್ರಣಾಧಿಕಾರಿ (ಆಂ.ಪ)/(ಕಂ ಮತ್ತು ಲೆ), ನಿಗಮ ಕಛೇರಿ, ಹು.ವಿ.ಸ.ಕಂ.ನಿ. ಹುಬ್ಬಳ್ಳಿ.
5. ಅಧೀಕ್ಷಕ ಇಂಜಿನೀಯರ್ (ವಿ)/ಉಪಲೆಕ್ಕನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ ವೃತ್ತ, ಹು.ವಿ.ಸ.ಕಂ.ನಿ, ಬೆಳಗಾವಿ/ಚಿಕ್ಕೋಡಿ/ಬಿಜಾಪೂರ/ಬಾಗಲಕೋಟ/ಹುಬ್ಬಳ್ಳಿ/ಹಾವೇರಿ/ಶಿರಸಿ.
6. ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಹು.ವಿ.ಸ.ಕಂ.ವಿ. ಹುಬ್ಬಳ್ಳಿ ಶಹರ ವಿಭಾಗ ಮತ್ತು ಗ್ರಾಮೀಣ ವಿಭಾಗ/ ಧಾರವಾಡ ಶಹರ ವಿಭಾಗ ಮತ್ತು ಗ್ರಾಮೀಣ ವಿಭಾಗ/ ಗದಗ/ಶಿರಸಿ/ ಕಾರವಾರ/ ಹಾವೇರಿ/ ರಾಣೆಬೆನ್ನೂರು/ ಬೆಳಗಾವಿ ಶಹರ ವಿಭಾಗ ಮತ್ತು ಗ್ರಾಮೀಣ ವಿಭಾಗ/ಬೈಲಹೊಂಗಲ್/ಘಟಪ್ರಭಾ/ಚಿಕ್ಕೋಡಿ/ಅಥಣಿ/ರಾಯಬಾಗ/ವಿಜಾಪೂರ/ಇಂಡಿ/ಬಾಗಲಕೋಟ/ ಜಮಖಂಡಿ/ ಮುಧೋಳ.
7. ಕಂದಾಯ ಎಮ್.ಎಫ್.
8. ಎಮ್.ಎಫ್.